
A.H.M.'s
ANJUMAN ARTS, SCIENCE AND COMMERCE COLLEGE,
ANJUMANABAD, BHATKAL-581320
(AFFILIATED TO THE KARNATAKA UNIVERSITY, DHARWAD)

# Peaceful tomorrow is ours "HOSATU" December 2021

ISSN 2319-7307



**KRITTIKAPURA - "The City of Kritika"**
**BHOGANKAROHANAWADA KHADE**
**By Prof. R. S. Nayak**

# ಕೃತ್ತಿಕಾಪುರ
## ಭೋಗಾಂಕಾರೋಹಣವಾದ ಕಥೆ


**ಪ್ರೊ|| ಆರ್. ಎಸ್. ನಾಯಕ, ಭಟ್ಕಳ**

ಒಂದು ರಾಜ್ಯ, ಅದಕ್ಕೊಬ್ಬ ರಾಜ. ಹೆಸರು ಅಗ್ನಿರಾಜ. ಒಮ್ಮೆ ಆತನಿಗೊಂದು ದುಷ್ಟ ಆಸೆಹುಟ್ಟಿತು. ಅದನ್ನು ಈಡೇರಿಸಿಕೊಳ್ಳುವುದಕ್ಕೋಸ್ಕರ ಎಲ್ಲರ ಒಪ್ಪಿಗೆಯನ್ನು ಪಡೆಯಲು ಆತ ಹುನ್ನಾರ ಮಾಡಿ ಸಭೆ ಕರೆದ. ಮಹಾರಾಣಿ ಸಹಿತವಾಗಿ ಸಾಮಂತರು, ಮಹಾಸಾಮಂತರು, ಪರಿವಾರದವರು, ಮಂತ್ರಿಗಳು, ಮಹರ್ಷಿಗಳು ಎಲ್ಲರೂ ಸೇರಿದರು. ಅವರೆಲ್ಲರ ಎದುರಿಗೆ ರಾಜ ಒಂದು ಪ್ರಶ್ನೆಯನ್ನು ಇಟ್ಟ. "ಎನ್ನಾಳ್ವ ಮಂಡಳಂಗಳೊಳ್ ಪುಟ್ಟಿದ ಲೇಸಪ್ಪ ವಸ್ತು ಆರ್ಗಕ್ಕುಂ?" ಅಂದರೆ 'ನಾನಾಳುವ ಈ ರಾಜ್ಯದಲ್ಲಿ ಉತ್ಪನ್ನವಾದ ಶ್ರೇಷ್ಠ ವಸ್ತು ಯಾರಿಗೆ ಸಲ್ಲಬೇಕು?' ರಾಜ ಕೇಳಿದ ಈ ಪ್ರಶ್ನೆಗೆ ಆತನ ನಿರೀಕ್ಷೆಯಂತೆ ಸೇರಿದವರೆಲ್ಲ ನೀಡಿದ ಉತ್ತರ ಒಂದೇ ರೀತಿ ಇತ್ತು. ಅವರೆಲ್ಲ ಹೇಳಿದರು: "ಒಳ್ಳಿತಪ್ಪ ಆನೆಯುಂ ಕುದುರೆಯುಂ ಮುತ್ತುಂ ಮಾಣಿಕಮುಂ ಸ್ತ್ರೀರತ್ನಮುಂ ಮೊದಲಾಗೆ ಒಳ್ಳಿತಪ್ಪ ಅಗ್ಗಳ ವಸ್ತುವೆಲ್ಲಂ ಪೃಥ್ವಿಯನ್ ಆಳ್ವಂಗೆ ಅಕ್ಕುಂ." ಶ್ರೇಷ್ಠವಾದ ಆನೆಯಿರಬಹುದು, ಕುದುರೆಯಿರಬಹುದು, ಮುತ್ತು ಮಾಣಿಕ್ಯಗಳಿರಬಹುದು, ಹೆಣ್ಣಿರಬಹುದು ಇವೆಲ್ಲವೂ ನಾಡನಾಳುವ ದೊರೆಗೆ ಸೇರತಕ್ಕದ್ದು ಎಂಬುದು ಅವರ ಅಂಬೋಣ.

ಆಳುವ ವರ್ಗ ತಾನು ಮಾಡುತ್ತಿರುವ ಅಥವಾ ಮಾಡಲಿರುವ ಕುಕೃತ್ಯಗಳಿಗೆ, ಭ್ರಷ್ಟಾಚಾರಗಳಿಗೆ ಎಂತಹ ಹುನ್ನಾರವನ್ನು ಮಾಡಿ ಪ್ರಜೆಗಳ ಒಪ್ಪಿಗೆಯನ್ನು ಪಡೆದುಕೊಳ್ಳುತ್ತದೆಂಬುದನ್ನು ಇಲ್ಲಿ ಗಮನಿಸಬೇಕು. ಅದರೊಟ್ಟಿಗೆ ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣನ್ನು ಯಾವ ಸ್ಥಾನದಲ್ಲಿ ಇಟ್ಟಿತ್ತು ಎಂಬುದನ್ನೂ ತಿಳಿಯಬೇಕು. ಸಭೆಯಲ್ಲಿದ್ದ ಸಭಿಕರೆಲ್ಲ ಯಾವುದೆಲ್ಲ ರಾಜನಿಗೆ ಸೇರಬೇಕೆಂದು ಹೇಳುವ ಪಟ್ಟಿಯಲ್ಲಿ ಆನೆ ಕುದುರೆಯಂತಹ ಪ್ರಾಣಿಗಳು ಹಾಗೂ ಮುತ್ತು ಮಾಣಿಕ್ಯದಂತಹ ಭೋಗದ ವಸ್ತುಗಳು ಇವೆ. ಇವುಗಳ ಜೊತೆಗೆ ಸ್ತ್ರೀಯನ್ನೂ ಸೇರಿಸಿರುವುದನ್ನು ಗಮನಿಸಿದರೆ ಪುರುಷ ಸಮಾಜ ಸ್ತ್ರೀಯನ್ನು ತನ್ನಂತೆ ಒಂದು ಮನುಷ್ಯ ಜೀವಿಯಾಗಿ ಪರಿಗಣಿಸದೆ ಪ್ರಾಣಿ ಮಾತ್ರಳಾಗಿಯೋ ಭೋಗದ ವಸ್ತುವನ್ನಾಗಿಯೋ ಪರಿಗಣಿಸಿತ್ತು ಎಂಬುದನ್ನು ಇದು ಸಂಕೇತಿಸುತ್ತದೆ.

ಆಳುವ ವರ್ಗದ ಹಂಗಿನಲ್ಲಿದ್ದವರಿಗೆ ಆಳುವವರಿಗೆ ಅನುಕೂಲವಾಗುವಂತೆ ನಡೆಯುವುದು ನುಡಿಯುವುದು ಅನಿವಾರ್ಯವಾಗಿರಬಹುದು. ಯಾಕೆಂದರೆ ಅವರಿಗೆ ಅವರದೇ ಆದ ಉದ್ಯೋಗ ಸಂಬಳ ವ್ಯವಹಾರ ವ್ಯವಸಾಯ ಊರು ಮನೆ ಮಡದಿ ಮಕ್ಕಳು ಎಲ್ಲ ಇರುತ್ತವೆ. ಆಳುವವರನ್ನು ಎದುರುಹಾಕಿಕೊಂಡರೆ ಬದುಕುವುದು ಕಷ್ಟ ಎಂಬುದು ಆವರ ನಿಲುವು. ಆದರೆ ಯಾರ ಹಂಗಿಗೂ ಒಳಪಡದ ಮಹರ್ಷಿಗಳೂ ಆ ಸಭೆಯಲ್ಲಿದ್ದಾರೆ. ಅವರಿಗೆಲ್ಲಿದೆ ಮನೆ, ಮಠ? ಸರ್ವಸಂಗ ಪರಿತ್ಯಾಗಿಗಳವರು. ಇಂದಿನ ಸ್ವಾಮಿಗಳಂತಲ್ಲ. ಜಗತ್ತೇ ಮನೆ ಎಂದು ಭಾವಿಸಿ ಅದರ ಹಿತಕ್ಕೋಸುಗ ಚಿಂತಿಸು ವವರು. ಅವರು ರಾಜನ ಪ್ರಶ್ನೆಗೆ ಉಳಿದವರಂತೆ ಯೋಚಿಸದೆ ಉತ್ತರಿಸುವುದಿಲ್ಲ. ರಾಜನ ಎದುರಿಗೆ ಮಹರ್ಷಿಗಳು ತಮ್ಮದೊಂದು ಪ್ರಶ್ನೆ ಇಡುತ್ತಾರೆ. ಸಾರಾಸಗಟಾಗಿ ಒಂದು ನಾಡಿನಲ್ಲಿ ಉತ್ಪನ್ನವಾದ ಶ್ರೇಷ್ಠ ವಸ್ತುಗಳು ಯಾರಿಗೆ ಸೇರಬೇಕೆಂದು ಕೇಳಿದರೆ ಉತ್ತರಿಸಲಾಗದು. ಬದಲಾಗಿ ನಾಡಿನಲ್ಲಿ ಹುಟ್ಟಿದ ಇಂತಿಂತಹ ವಸ್ತು ಯಾರಿಗೆ ಸಲ್ಲಬೇಕು ಎಂದು ಕೇಳಿದರೆ ಉತ್ತರಿಸಬಹುದು. ಅದಕ್ಕಾಗಿ ಯಾವ ವಸ್ತು ಎಂಬುದನ್ನು ಮೊದಲು ಹೇಳು; ಆಗ ಆ ವಸ್ತು ರಾಜನಿಗೆ ಸಲ್ಲಲು ಯೋಗ್ಯವೋ ಅಲ್ಲವೋ ಎಂಬುದನ್ನು ಹೇಳುತ್ತೇವೆ ಎಂದರು. ಇದು ನ್ಯಾಯವಾದ ಮಾತು. ಆದರೆ...

ತಾವು ಎಲ್ಲರನ್ನೂ ಪ್ರಶ್ನಿಸಬಹುದು; ಆದರೆ ತಮ್ಮನ್ನು ಯಾರೂ ಪ್ರಶ್ನಿಸಬಾರದು ಎಂಬುದು ಆಳುವ ವರ್ಗದ ಧೋರಣೆ. ಇಂದಿಗೂ ಆ ಧೋರಣೆ ಬದಲಾಗಿಲ್ಲ. ಅಗ್ನಿರಾಜನಿಗೆ ತನ್ನನ್ನು ಪ್ರಶ್ನಿಸಿದ ಮಹರ್ಷಿಗಳ ಮೇಲೆ ಅಸಾಧ್ಯವಾದ ಕೋಪ ಬರುತ್ತದೆ. ಅವರನ್ನು ಬೈದು ಹೀಯಾಳಿಸಿ ರಾಜ್ಯದಿಂದ ಹೊರಗಟ್ಟುತ್ತಾನೆ. ಉಳಿದವರಲ್ಲಿ



A.H.M.'s
ANJUMAN ARTS, SCIENCE AND COMMERCE COLLEGE,
ANJUMANABAD, BHATKAL-581320
(AFFILIATED TO THE KARNATAKA UNIVERSITY, DHARWAD)

# "SHABDAMANIDARPANA SANGRAHA MATTU VIVARANA"
## (OLD KANNADA GRAMMAR)
### By Prof. R. S. Nayak

ISBN NO. 978-93-5493-932-7



**ಪ್ರೊ. ಆರ್. ಎಸ್. ನಾಯಕರ ಕೃತಿಗಳು:**

1. ಕುವೆಂಪು ವಿರಚಿತ ಶ್ಮಶಾನ ಕುರುಕ್ಷೇತ್ರಂ: ಒಂದು ಅಧ್ಯಯನ (ವಿಮರ್ಶೆ)
2. ನೀಲಾಂಜನ (ವಿಮರ್ಶೆ)
3. ಸಾಹಿತ್ಯ ರಸದೀವಿಗೆ (ವಿಮರ್ಶೆ)
4. ಜಾಹೀರಾತಿನ ಹುಡುಗಿ (ಕವನ ಸಂಕಲನ)
5. ಉದಾತ್ತ ನಾರಾಯಣ ಮತ್ತು ಇತರ ಲೇಖನಗಳು (ವಿಮರ್ಶೆ)
6. ಶಬ್ದಮಣಿದರ್ಪಣ ಸಂಗ್ರಹ ಮತ್ತು ವಿವರಣ



ISBN: 978-93-5493-932-7

# ಶಬ್ದಮಣಿದರ್ಪಣ ಸಂಗ್ರಹ
## ಮತ್ತು ವಿವರಣ
### (ಸಂಧಿ, ನಾಮ ಮತ್ತು ಸಮಾಸ ಪ್ರಕರಣಗಳು)



**ಪ್ರೊ. ಆರ್. ಎಸ್. ನಾಯಕ**

**ಶ್ರೇಯಾರಾಂ ಪ್ರಕಾಶನ, ಭಟ್ಕಳ**

**SHABDAMANIDARPANA SANGRAHA MATTU VIVARANA :** Grammer of old kannada language by: Prof. Rama Santu Nayak, Assistant professor, Dept. of Kannada, Anjuman Arts, Science, Commerce College & P G Centre, Bhatkal, Uttara Kannada. 581320.
M: 9482240406. Email: nayakrama65@gmail.com

**Published by:** Prof. Rama Santu Nayak, Assistant professor, Dept. of Kannada, Anjuman Arts, Science, Commerce College & P G Centre, Bhatkal, Uttara Kannada. 581320

**Copy Right:** Author

**First Edition:** 2021 **Copies :** 1000
**Price: Rs.** 100/- **Page: 8+118=126**
**Size:** 1/8 Demi **Paper:** 70 GSM: N.S.Maplitho

**ISBN No:** 978-93-5493-932-7

ಶಬ್ದಮಣಿ ದರ್ಪಣ ಸಂಗ್ರಹ ಮತ್ತು ವಿವರಣ: (ಸಂಧಿ–ನಾಮ–ಸಮಾಸ ಪ್ರಕರಣ)
**ಲೇಖಕರು:** ಪ್ರೊ. ಆರ್. ಎಸ್. ನಾಯಕ
**ಪ್ರಕಾಶಕರು:** ಶ್ರೇಯಾರಾಂ ಪ್ರಕಾಶನ, ಭಟ್ಕಳ
**ಹಕ್ಕುಗಳು:** ಲೇಖಕರದ್ದು
**ಪ್ರಥಮ ಮುದ್ರಣ:** ೨೦೨೧ **ಪ್ರತಿಗಳು :** ೧೦೦೦
**ಬೆಲೆ:** ರೂ. ೧೦೦/– **ಪುಟಗಳು:** ೮+೧೧೮=೧೨೬
**ಸೈಜ್:** ೧/೮ ಡೆಮಿ ಸೈಜ್
**ಕಾಗದ:** ೭೦ ಜಿಎಸ್ಎಂ: ಎನ್.ಎಸ್. ಮ್ಯಾಪ್‌ಲಿಥೋ
**ರಕ್ಷಾಪುಟ:** ಶ್ರೇಯಸ್ ನಾಯಕ
**ಮುದ್ರಕರು:** ರವೀಂದ್ರ ಸೋ. ಆಕಳವಾಡಿ
ಮನೋಹರ ಮುದ್ರಣಾಲಯ, ಮಾರ್ಕೆಟ್, ಧಾರವಾಡ
ದೂರವಾಣಿ: ೨೭೩೦೦೯೦, ಮೊಬೈಲ್: ೯೧೪೧೨೦೧೧೭೦

**ISBN No: 978-93-5493-932-7**

## ಮೊದಲ ಮಾತು:

ಪುರಾತನ ಕವಿಗಳ ಹೇಳಿಕೆಯನ್ನು ಗಮನಿಸಿದರೆ ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದಂತೆ ಅನೇಕ ಕೃತಿಗಳು ಹಿಂದೆ ರಚನೆಗೊಂಡಿರಬೇಕೆಂದು ಊಹಿಸಲವಕಾಶವಿದೆ. ದುರ್ವಿನೀತ, ಕವಿರತ್ನ ರನ್ನ, ನಯಸೇನ, ಜನ್ನ ಮೊದಲಾದ ಕನ್ನಡ ಕಾವ್ಯಕೃತಿ ರಚಕರು ವ್ಯಾಕರಣ ಗ್ರಂಥಗಳನ್ನೂ ಬರೆದಿರಬಹುದೆಂದು ತರ್ಕಿಸಬಹುದಾದರೂ ನಿಖರವಾಗಿ ಹೇಳುವುದು ಕಷ್ಟ. ಕನ್ನಡದ ಮೊಟ್ಟಮೊದಲ ಉಪಲಬ್ಧ ಕೃತಿಯಾದ ಕವಿರಾಜಮಾರ್ಗದಲ್ಲಿ ವ್ಯಾಕರಣಕ್ಕೆ ಸಂಬಂಧಿಸಿದ ವಿಷಯದ ಪ್ರಸ್ತಾಪವಿದ್ದರೂ ಮೂಲಭೂತವಾಗಿ ಅದು ಅಲಂಕಾರಕ್ಕೆ ಸೀಮಿತವಾದ ಕೃತಿ.

ಈವರೆಗೆ ಲಭ್ಯವಾಗಿರುವ ಕನ್ನಡ ಪ್ರಾಚೀನ ಗ್ರಂಥರಾಶಿಯನ್ನು ಅವಲೋಕಿಸಿದರೆ, ಕನ್ನಡ ವ್ಯಾಕರಣ ಕೃತಿಗಳು ದೊರೆಯುವುದು ಮೂರೂವರೆ ಮಾತ್ರವೆಂದು ಹೇಳಬೇಕಾಗುತ್ತದೆ. ಎರಡನೆಯ ನಾಗವರ್ಮನ 'ಕಾವ್ಯಾವಲೋಕನ' ಗ್ರಂಥದಲ್ಲಿ ಬರುವ ಒಂದು ಭಾಗವಾದ ಶಬ್ದಸ್ಮೃತಿ ಅಧ್ಯಾಯ ಮಾತ್ರ ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದ್ದು. ಇದರಲ್ಲಿ ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ ಎಂಬ ಐದು ಅಧ್ಯಾಯಗಳನ್ನು ೯೬ ಸೂತ್ರಗಳಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಇದೇ ಕವಿಯ 'ಕರ್ಣಾಟಕ ಭಾಷಾಭೂಷಣ'ವು ಸಂಸ್ಕೃತ ಭಾಷೆಯಲ್ಲಿರುವ ಕನ್ನಡ ವ್ಯಾಕರಣ ಕೃತಿ. ಇದು ಒಂದು ಸಮಗ್ರ ಮತ್ತು ಸ್ವತಂತ್ರ ಕೃತಿಯಾಗಿದ್ದು, ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದಂತೆ ಅನೇಕ ಮುಖ್ಯ ವಿಚಾರಗಳನ್ನು ಒಳಗೊಂಡಿದೆ. ಭಟ್ಟಾಕಳಂಕದೇವನ 'ಶಬ್ದಾನುಶಾಸನ'ವು ಇನ್ನೊಂದು ಸಂಸ್ಕೃತ ಭಾಷೆಯಲ್ಲಿರುವ ಕನ್ನಡ ವ್ಯಾಕರಣ ಗ್ರಂಥ. ೫೯೨ ಸೂತ್ರಗಳನ್ನು ಹೊಂದಿದ ಇದು ಎರಡನೇ ನಾಗವರ್ಮನ 'ಕರ್ಣಾಟಕ ಭಾಷಾಭೂಷಣ'ದ ವಿಸ್ತೃತ ರೂಪವಾಗಿದೆ. ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದಂತೆ ಪ್ರಸಿದ್ಧವಾದ ಕೃತಿಯೆಂದರೆ ಕೇಶಿರಾಜನ 'ಶಬ್ದಮಣಿದರ್ಪಣ'.

ಕೇಶಿರಾಜನ ಕಾಲ ಕ್ರಿ. ಶ. ೧೨೬೦ ಎಂದು ತಿಳಿದು ಬಂದಿದೆ. ಜೈನ ಮತಕ್ಕೆ ಸೇರಿದ ಈ ವ್ಯಾಕರಣಕಾರ 'ಸೂಕ್ತಿಸುಧಾರ್ಣವ'ದ ಕರ್ತೃ ಯೋಗಿಪ್ರವರ ಮಲ್ಲಿಕಾರ್ಜುನನ ಮಗನೂ, ಕವಿ ಸುಮನೋಬಾಣನ ಮೊಮ್ಮಗನೂ ಆಗಿದ್ದಾನೆ. ಕವಿ ಜನ್ನನಿಗೆ ಕೇಶಿರಾಜ ಸೋದರಳಿಯನಾಗುತ್ತಾನೆ. ಇದರಿಂದ ಈತ ವಿದ್ವತ್ಪರಂಪರೆಯಿಂದ ಮೂಡಿಬಂದ ಚೇತನವೆಂದು ತಿಳಿಯುತ್ತದೆ.

A.H.M.'s


# ANJUMAN ARTS, SCIENCE AND COMMERCE COLLEGE, ANJUMANABAD, BHATKAL-581320

(AFFILIATED TO THE KARNATAKA UNIVERSITY, DHARWAD)

## UDATTANARAYANA MATTU ETARA LEKHANAGALU

**"Udatta Narayana and Other Writings" By Prof. R. S Nayak**

**ISBN NO. 978-93-5473-874-6**






"UDATTANARAYANA MATTU ITARA LEKHANAGALU" : Critical and Research Articles by: Prof. Rama Santu Nayak, Assistant Professor, Dept. of Kannada, Anjuman Arts, Science, Commerce College & P G Centre, Bhatkal, Uttara Kannada. 581320 M : 9482240406

**Published by:** Prof. Ramạ Santu Nayak, Assistant professor, Dept. of Kannada, Anjuman Arts, Science, Commerce College & P G Centre, Bhatkal, Uttara Kannada. 581320

**Copy Right:** Author

**First Edition:** 2021

**Price:** 70/- **Page:** vi + 62

**Size:** 1/8 Demi **Paper:** 70 GSM: N.S.Maplitho

**ISBN No: 978-93-5473-874-6**

ಉದಾತ್ತನಾರಾಯಣ ಮತ್ತು ಇತರ ಲೇಖನಗಳು

ಲೇಖಕರು: ಪ್ರೊ, ಆರ್. ಎಸ್. ನಾಯಕ.

ಪ್ರಕಾಶಕರು: ಶ್ರೇಯಾರಾಂ ಪ್ರಕಾಶನ, ಭಟ್ಕಳ

ಹಕ್ಕುಗಳು: ಲೇಖಕರದ್ದು

ಪ್ರಥಮ ಮುದ್ರಣ: ೨೦೨೧

ಬೆಲೆ: ೭೦/– ಪುಟಗಳು: vi + ೬೨

ಸೈಜ್: ೧/೮ ಡೆಮಿ ಸೈಜ್

ಕಾಗದ: ೭೦ ಜಿಎಸ್ಎಂ:ಎನ್.ಎಸ್. ಮ್ಯಾಪ್‌ಲಿಥೋ

ರಕ್ಷಾಪುಟ:

ಮುದ್ರಕರು: ರವೀಂದ್ರ ಆಕಳವಾಡಿ,
ಮನೋಹರ ಮುದ್ರಣಾಲಯ, ಮಾರ್ಕೆಟ್, ಧಾರವಾಡ
ದೂರವಾಣಿ: ೨೭೩೦೦೯೦, ಮೊಬೈಲ್: ೯೧೪೧೨೦೧೧೭೦



### ಒಂದು ಮಾತು...

ಇದು ನನ್ನ ನಾಲ್ಕನೆಯ ವಿಮರ್ಶಾ ಲೇಖನಗಳ ಸಂಗ್ರಹ ಕೃತಿ. ಯಾವುದೇ ಒಂದು ಕೃತಿ ಅಥವಾ ಕೃತಿಯ ಭಾಗವನ್ನು ಎದೆಗೆ ಹಚ್ಚಿಕೊಂಡು ಓದುವಾಗ ಇಲ್ಲವೇ ಓದಿಸುವಾಗ ಅದರ ಬಗ್ಗೆ ಏನಾದರು ಬರೆಯಬೇಕು ಎಂಬ ಒತ್ತಡ ತೀವ್ರವಾದಾಗ ಬರೆದ ಲೇಖನಗಳಿವು. ಈ ತೀವ್ರ ಭಾವ ಬಲಿಯಲು ನನ್ನ ವಿದ್ಯಾರ್ಥಿಗಳೂ ಪರೋಕ್ಷ ಕಾರಣವೆಂದು ಅಂದುಕೊಳ್ಳುತ್ತೇನೆ.

ಈ ಸಂಗ್ರಹದಲ್ಲಿರುವ ಕೆಲವು ಲೇಖನಗಳು ಕರಾವಳಿ ಮುಂಜಾವು ಮತ್ತು ಹೊಸತು ಮಾಸಿಕದಲ್ಲಿ ಪ್ರಕಟವಾಗಿವೆ. ಆ ಎರಡೂ ಪತ್ರಿಕೆಗಳ ಸಂಪಾದಕರಿಗೆ ನನ್ನ ನಮನಗಳು.

ಎಂದಿನಂತೆ ಈ ಕೃತಿಯನ್ನೂ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಧಾರವಾಡದ ಮನೋಹರ ಮುದ್ರಣಾಲಯದ ಮಾಲಿಕರಾದ ಶ್ರೀ ರವೀಂದ್ರ ಆಕಳವಾಡಿ ಮತ್ತು ಶ್ರೀ ಚಂದ್ರಶೇಖರ ಆಕಳವಾಡಿ ಸಹೋದರರಿಗೆ ಮತ್ತು ಸಿಬ್ಬಂದಿಗಳಿಗೆ ಪ್ರೀತಿಪೂರ್ವಕ ವಂದನೆಗಳು.

ಮತ್ತೆ ಈ ಕೃತಿಯ ಬಗ್ಗೆ ನಾನು ಹೇಳಬೇಕಾದುದೇನೂ ಇಲ್ಲವೆನಿಸುತ್ತದೆ. ಸಹೃದಯ ಬಂಧುಗಳು ಏನಾದರೂ ಹೇಳಿದರೆ ಕೇಳಿಸಿಕೊಳ್ಳಬಹುದಷ್ಟೆ.

ಎಲ್ಲರಿಗೂ ನಮಸ್ಕಾರಗಳು.